**ಮೂಲ ದಾವಾ ನಂಃ 4/2025**
**ಡಿ. ಡಬ್ಲ್ಯು 1**

**(ಇಂದು ದಿನಾಂಕಃ 10.03.2026 ರಂದು ಡಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್ ವಿ ಬಿ ರವರಿಂದಃ**

13. ನಿಮ್ಮ ತಂದೆಯವರು ಜೀವಂತ ಇರುವಾಗ ಅವರು ಒಂದು ಕಾರಿನಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಅವರು ತೀರಿಕೊಳ್ಳುವ 3 ತಿಂಗಳ ಮೊದಲು ಒಂದು ಹೊಸ ಕಾರನ್ನು ಖರೀದಿಸಿದ್ದರು ಎಂದರೆ ಸರಿ. ಅವರು ತೀರಿಕೊಳ್ಳುವಾಗ ಹೊಸದಾಗಿ ಖರೀದಿಸಿದ್ದ ಇಂಡಿಕಾ ವಿಸ್ತಾ ಕಾರನ್ನು ನನಗೆ ಬಿಟ್ಟು ಹೋಗಿದ್ದರು ಎಂದರೆ ಸರಿ. ಸದ್ರಿ ಕಾರು ಈಗಲೂ ಸಹ ನನ್ನ ಬಳಿ ಇದ್ದು ಅದನ್ನು ಉಪಯೋಗಿಸುತ್ತಿದ್ದೇನೆ ಎಂದರೆ ಸರಿ. ಸದ್ರಿ ಕಾರಿಗೆ ರೂ. 4,00,000/– ಸಾಲ ಇತ್ತು ಅಂತಾ ಮುಂದುವರಿದು ಉತ್ತರಿಸುತ್ತಾರೆ. ಸದ್ರಿ ಕಾರಿಗೆ ಯಾವುದೇ ಸಾಲ ಇರಲಿಲ್ಲ, ಇತ್ತು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಅದೇ ರೀತಿ ದಾವಾ 'ಸಿ' ಶೆಡ್ಯೂಲ್ ನಲ್ಲಿ ಕಾಣಿಸಿರುವ ವಾಹನಗಳು ನಮ್ಮ ತಂದೆಯವರಿಗೆ ಸಂಬಂಧಿಸಿದ ವಾಹನಗಳು ಎಂದರೆ ಸರಿ. ಆ ಎಲ್ಲಾ ವಾಹನಗಳು ನನ್ನ ತಂದೆ ತೀರಿಕೊಂಡ ನಂತರ ನನ್ನ ಬಳಿಯೇ ಇದ್ದವು ಎಂದರೆ ಸರಿಯಲ್ಲ. ಆ ವಾಹನಗಳು ಏನಾದವು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ಎಲ್ಲಾ ವಾಹನಗಳು ನಿಮ್ಮ ಬಳಿಯೇ ಇದ್ದು ನೀವೇ ಅವುಗಳನ್ನು ಉಪಯೋಗಿಸುತ್ತಾ ಬಂದಿದ್ದು ಆ ಬಗ್ಗೆ ಮಾಹಿತಿ ಇಲ್ಲಾ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನೀವು ಹಾಜರುಪಡಿಸಿರುವ ನಿಡಿ–30 ರಿಂದ 41 ರ ದಾಖಲೆಗಳು ಯಾವ ಆಸ್ತಿಗೆ ಸಂಬಂಧಿಸಿದಂತೆ ಪಾವತಿಸಿರುವ ತೆರಿಗೆ ಎಂದರೆ ಸಾಕ್ಷಿ ಸದಾಶಿವಗಡದ ಫ್ಯಾಕ್ಟರಿ ಇರುವ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಅಂತಾ ಉತ್ತರಿಸುತ್ತಾರೆ. ನಿಡಿ–30 ರಿಂದ 41ರ ದಾಖಲೆಗಳ ಪ್ರಕಾರ ನೀವು ಘನತ್ಯಾಜ್ಯ ವಿಲೇವಾರಿ ನಿರ್ವಹಣಾ ವೆಚ್ಚವನ್ನು ಪಾವತಿ ಮಾಡಿದ್ದೀರಿ ಎಂದಾದರೇ ಸದ್ರಿ ಆಸ್ತಿಯಲ್ಲಿರುವ ಕಾರ್ಖಾನೆ ಮತ್ತು ಐಸ್ ಪ್ಲಾಂಟು ಹಾಗೂ ಫಿಶ್ ಕ್ಯಾನಿಂಗ್ ವ್ಯವಹಾರ ಚಾಲ್ತಿಯಲ್ಲಿದ್ದವು ಎಂದರ್ಥ ಎಂದರೆ ಸಾಕ್ಷಿ ನಮಗೆ ಪಂಚಾಯತಿಯಿಂದ ಕಿರುಕುಳ ಆಗಿರುವುದರಿಂದ ಪಾವತಿ ಮಾಡಿರುವುದು ಅಂತಾ ಉತ್ತರಿಸುತ್ತಾರೆ. ಒಂದು ವೇಳೆ ಅಂತಹ ಯಾವುದೇ ವ್ಯವಹಾರಗಳು ನಡೆಯದೇ ಇದ್ದ ಪಕ್ಷದಲ್ಲಿ ಆ ರೀತಿ ತೆರಿಗೆಗಳನ್ನು ಪಾವತಿ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸಾಕ್ಷಿ ಆಸ್ತಿ ಜಪ್ತಿ ಮಾಡಬಹುದು ಎಂಬ ಆತಂಕದಿಂದ

ಕಟ್ಟಿದ್ದೇವೆ ಅಂತಾ ಉತ್ತರಿಸುತ್ತಾರೆ. ನೀವು ಸದ್ರಿ ಆಸ್ತಿಗಳಲ್ಲಿರುವ ಎಲ್ಲಾ ವ್ಯವಹಾರಗಳನ್ನು ನಿಮ್ಮ ತಂದೆಯವರ ಕಾಲಾ ನಂತರ ಮುಂದುವರಿಸಿಕೊಂಡು ಬಂದಿದ್ದರಿಂದ ಸದ್ರಿ ವ್ಯವಹಾರ ನಿರ್ವಹಣೆಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಆ ರೀತಿ ತೆರಿಗೆಗಳನ್ನು ಕಟ್ಟಿರುತ್ತೇನೆ ಎಂದರೆ ಸುಳ್ಳು.

16. ನಿಡಿ–4 ರ ಸಾಲ ಈಗ ಸಂಪೂರ್ಣ ಚುಕ್ತಾ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆಯವರಿಗೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿ ಸದ್ರಿ ಸಾಲವನ್ನು ಚುಕ್ತಾ ಮಾಡಲಾಗಿದೆ ಎಂದರೆ ಸರಿ. ಆ ರೀತಿ ಮಾರಾಟ ಮಾಡಿರುವ ಆಸ್ತಿ ಈ ದಾವೆಯ ಶೆಡ್ಯೂಲ್ ನಲ್ಲಿ ಇರುವುದಿಲ್ಲ ಎಂದರೆ ಸರಿ.

17. ನಿಡಿ–5 ರ ಸಾಲವು ಈಗ ಸಂಪೂರ್ಣವಾಗಿ ಚುಕ್ತಾ ಆಗಿರುತ್ತದೆ ಎಂದರೆ ಸರಿ.

18. ನಿಡಿ–6 ರ ಸಾಲವು ಸಹ ಪೂರ್ತಿಯಾಗಿ ಚುಕ್ತಾ ಆಗಿರುತ್ತದೆ ಎಂದರೆ ಸರಿ.

19. ನಿಡಿ– 7 ರಿಂದ 9 ರ ಸಾಲಗಳು ಸಹ ಪೂರ್ತಿಯಾಗಿ ಚುಕ್ತಾ ಆಗಿರುತ್ತದೆ ಎಂದರೆ ಸರಿ.

20. ನಿಡಿ–10 ರಿಂದ 13 ರ ರಶೀದಿಗಳು ಮಾರಾಟ ತೆರಿಗೆ ಪಾವತಿ ರಶೀದಿಗಳು ಎಂದರೆ ಸರಿ. ನಿಡಿ–10 ರಿಂದ 13 ರ ರಶೀದಿಗಳು ನಿಮ್ಮ ತಂದೆಯವರ ವ್ಯವಹಾರವನ್ನು ನೀವು ಮುಂದುವರಿಸಿಕೊಂಡು ಬಂದಿದ್ದರಿಂದ ಅದಕ್ಕೆ ಸಂಬಂಧಿಸಿದಂತೆ ಕಟ್ಟಿದ ಮಾರಾಟ ತೆರಿಗೆಯ ರಶೀದಿಗಳು ಎಂದರೆ ಸರಿ.

21. ನಿಡಿ–14 ರಿಂದ 22 ರವರೆಗಿನ ದಾಖಲೆಗಳು ನೀವು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ.

22. ನಿಡಿ–25 ರಲ್ಲಿ ನಮೂದಿಸಿದ ಸರ್ವೆ ನಂಬ್ರ 795/1 ಆಸ್ತಿಯು ನಮ್ಮ ತಂದೆಯವರ ಹೆಸರಿಗೆ ಕ್ರಯದಸ್ತು ನೊಂದಣಿ ಆಗಿರುತ್ತದೆ ಎಂದರೆ ಸರಿ.

23. ನಿಡಿ–25 ರಿಂದ 29 ರವರೆಗಿನ ದಾಖಲೆಗಳು ಈ ದಾವೆಗೆ ಯಾವುದೇ ರೀತಿಯಿಂದಲೂ ಸಂಬಂಧಪಡದ ದಾಖಲೆಗಳು ಹಾಗೂ ನಾನು ಅವುಗಳನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

24. ಗಿರಿ ಫಿಶ್ ಕ್ಯಾನಿಂಗ್ ಹಾಗೂ ಐಸ್ ಪ್ಲಾಂಟ್ ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರದಿಂದ ಸಬ್ಸಿಡಿ ಬರುತ್ತಿತ್ತು ಎಂದರೆ ಸರಿ. ನಿಮ್ಮ ತಂದೆಯವರು ಜೀವಂತ ಇರುವಾಗ ಹಾಗೂ ತೀರಿಕೊಂಡ ನಂತರವೂ ಸಹ ಸಬ್ಸಿಡಿ ಬಂದಿರುತ್ತದೆ ಎಂದರೆ ಸರಿ. ಆ ರೀತಿ ಬಂದ ಸಬ್ಸಿಡಿ ಹಣವು ವ್ಯವಹಾರಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿ. ನೀವು ಯಾವುದೇ ಸಬ್ಸಿಡಿ ಹಣವನ್ನು ಮರಳಿಸಿದ ಬಗ್ಗೆ ನಿಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ನಾನು ಸಬ್ಸಿಡಿ ಹಣವನ್ನು ವಾಪಾಸು ಕೇಳಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

25. ವಾದಿಗೆ ದಾವಾ ಆಸ್ತಿಯಲ್ಲಿ ಭಾಗಾಂಶ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸಂಬಂಧಪಡದ ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರ ವಹಿವಾಟುಗಳನ್ನು ನೀವು ಮುಂದುವರಿಸಿಕೊಂಡು ಬಂದ ಕಾರಣ ಸದ್ರಿ ವ್ಯವಹಾರಕ್ಕೆ ಸಂಬಂಧಿಸಿದ ಲಾಭದ ಲೆಕ್ಕಾಚಾರವನ್ನು ವಾದಿಗೆ ಕೊಡಲು ನೀವು ಬಾಧ್ಯಸ್ಥರು ಹಾಗೂ ಅದೇ ರೀತಿ ಸದ್ರಿ ಲಾಭದಲ್ಲಿ ವಾದಿಯರಿಗೆ ಭಾಗಾಂಶವನ್ನು ಕೊಡಲು ಸಹ ನೀವು ಬಾಧ್ಯಸ್ಥರು ಎಂದರೆ ಸುಳ್ಳು. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಿಮ್ಮ ತಾಯಿ ಜ್ಯೋತಿ ಪ್ರಭಾಕರ ನಾಯ್ಕರವರು ಅವರ ತವರು ಮನೆಯಿಂದ ಹಣವನ್ನು ತಂದು ತಂದೆಯವರ ಆಸ್ತಿ ಹಾಗೂ ವ್ಯವಹಾರದಲ್ಲಿ ತೊಡಗಿಸಿದ್ದರು ಅಂತಾ ಸುಳ್ಳು ಹೇಳಿರುವುದು ಎಂದರೆ ಸರಿಯಲ್ಲ. ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ಸಾಲವನ್ನು ತೀರಿಸಿರುತ್ತೇನೆ ಅಂತಾ ಸುಳ್ಳು ಹೇಳಿರುವುದು ಎಂದರೆ ಸರಿಯಲ್ಲ.

26. ದಾವಾ ಆಸ್ತಿಯಲ್ಲಿರುವ ಮನೆಯಲ್ಲಿಯೇ ನಾನು ವಾಸವಾಗಿರುತ್ತೇನೆ ಎಂದರೆ ಸರಿ. ಸದ್ರಿ ಮನೆಯ ಕೆಲವೊಂದು ಭಾಗವನ್ನು ಬಾಡಿಗೆಗೆ ಕೊಟ್ಟಿರುತ್ತೇನೆ ಎಂದರೆ ಸುಳ್ಳು. ನಿಮ್ಮ ತಂದೆಯವರು ತೀರಿಕೊಂಡ ನಂತರ ವಾದಿಗೆ ಅವರ ಜೀವನ ನಿರ್ವಹಣೆಗೆ ಯಾವುದೇ ಹಣದ ಸಹಾಯ ಮಾಡಿದ್ದು ಇರುವುದಿಲ್ಲ ಎಂದರೆ ಸಾಕ್ಷಿ ಮೊದಲ 3-4 ತಿಂಗಳು ನನ್ನ ಖರ್ಚಿನಲ್ಲೇ ಅವರಿಗೆ ಹಣ ಕೊಟ್ಟಿದ್ದೆ ನಂತರ ಅವರು ಮನೆ ಬಿಟ್ಟು ಹೋದ ಕಾರಣ ಏನೂ ಮಾಡಲು ಆಗಲಿಲ್ಲ ಅಂತಾ ಉತ್ತರಿಸುತ್ತಾರೆ. ವಾದಿ ಅವರ ಜೀವನ ನಿರ್ವಹಣೆಗೆ ಬೇರೆಯವರ ಮನೆಯಲ್ಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದಾರೆ ಎಂದರೆ ಸಾಕ್ಷಿ ನಾವು ಅವರನ್ನು ಯಾವತ್ತು ಮನೆಯಿಂದ ಹೊರ ಹಾಕಿರುವುದಿಲ್ಲ ಅಂತಾ ಉತ್ತರಿಸುತ್ತಾರೆ. ವಾದಿಗೆ ದಾವಾ

**ಮೂಲ ದಾವಾ ನಂಃ 4/2025**

**ಡಿ. ಡಬ್ಲ್ಯು 1**

ಆಸ್ತಿಯಲ್ಲಿ ಕಾನೂನು ಪ್ರಕಾರ ಹಿಸ್ಸೆ ಕೊಡುವುದನ್ನು ತಪ್ಪಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**